# ‘ಶಿಕ್ಷಕರ ಹೃದಯ ಗೆದ್ದವರು ಶಂಭಣ್ಣ’

## ಸೇವೆ, ಹೋರಾಟ, ಸರಳತೆ ಮುತ್ತು

### ಮಾನವೀಯತೆಯ ಪ್ರತೀಕವಾಗಿ ಬೆಳೆದ ಅಪರೂಪದ ನಾಯಕ







## ಒಂದು ಹೆಸರು... ಒಂದು ನಂಬಿಕೆ...

ಇಂದು ಕರ್ನಾಟಕದ ಸಾವಿರಾರು ಶಿಕ್ಷಕರು ಮತ್ತು ಸರ್ಕಾರಿ ನೌಕರರ ಮನಸ್ಸಿನಲ್ಲಿ “ಶಂಭಣ್ಣ” ಎಂಬ ಹೆಸರು ಕೇವಲ ವ್ಯಕ್ತಿಯ ಹೆಸರಲ್ಲ. ಅದು ಶಿಕ್ಷಕರ ಅಣ್ಣ, ನೌಕರರ ಧ್ವನಿ, ಹೋರಾಟದ ನಾಯಕ, ಸರಳತೆಯ ಪ್ರತೀಕ, ಮಾನವೀಯತೆಯ ರೂಪ. ತಮ್ಮ ಸಾರ್ಥಕ ಸೇವಾ ಜೀವನದ ಮೂಲಕ ಶ್ರೀ ಶಂಭುಲಿಂಗನಗೌಡ ಪಾಟೀಲ್ ಹಲಗೇರಿ ಅವರು ಸಮಾಜಕ್ಕೆ ನೀಡಿರುವ ಸಂದೇಶ ಒಂದೇ “ಜನರಿಗಾಗಿ ಬದುಕಿದ ಜೀವನವೇ ಸಾರ್ಥಕ ಜೀವನ.” ಅವರ ಸೇವೆ, ಹೋರಾಟ, ಸರಳತೆ ಮತ್ತು ಮಾನವೀಯತೆ ಮುಂದಿನ ಪೀಳಿಗೆಗೆ ಸದಾ ಸ್ಫೂರ್ತಿಯಾಗಿರಲಿ. ನಿವೃತ್ತಿ ಜೀವನವು ಆರೋಗ್ಯಪೂರ್ಣ, ಸಂತೋಷಮಯ ಹಾಗೂ ಸಮಾಜಸೇವೆಯಿಂದ ಕೂಡಿರಲಿ ಎಂಬುದು ಶಿಕ್ಷಕರು, ನೌಕರರು ಹಾಗೂ ಅಭಿಮಾನಿಗಳ ಹೃತ್ಪೂರ್ವಕ ಹಾರೈಕೆಯಾಗಿದೆ.



**ಕೊಪ್ಪಳ: ಕರ್ನಾಟಕದ ಶಿಕ್ಷಕರು ಮತ್ತು ಸರ್ಕಾರಿ ನೌಕರರ ಲೋಕದಲ್ಲಿ ಕೆಲವು ಹೆಸರುಗಳು ಕೇವಲ ವ್ಯಕ್ತಿಗಳಾಗಿ ಉಳಿಯುವುದಿಲ್ಲ; ಅವು ಒಂದು ವಿಶ್ವಾಸ, ಒಂದು ಭರವಸೆ, ಒಂದು ಹೋರಾಟದ ಸಂಕೇತವಾಗಿ ಜನಮನದಲ್ಲಿ ಅಚ್ಚೊತ್ತಿಕೊಂಡಿರುತ್ತವೆ. ಅಂತಹ ಅಪರೂಪದ ವ್ಯಕ್ತಿತ್ವಗಳಲ್ಲಿ ಪ್ರಮುಖರು ಶಿಕ್ಷಕರು ಮತ್ತು ನೌಕರರ ಪ್ರೀತಿಯ “ಶಂಭಣ್ಣ” ಎಂದೇ ರಾಜ್ಯಾದ್ಯಂತ ಪರಿಚಿತರಾಗಿರುವ ಶ್ರೀ ಶಂಭುಲಿಂಗನಗೌಡ ಪಾಟೀಲ್ ಹಲಗೇರಿ ಅವರು.**

ಒಬ್ಬ ಸಾಮಾನ್ಯ ಶಿಕ್ಷಕರಾಗಿ ಸೇವಾ ಜೀವನ ಆರಂಭಿಸಿ, ಸಾವಿರಾರು ಶಿಕ್ಷಕರು ಮತ್ತು ನೌಕರರ ಆಶಾಕಿರಣವಾಗಿ, ಹಕ್ಕುಗಳ ಹೋರಾಟದ ಧ್ವನಿಯಾಗಿ, ಸಂಘಟನೆಯ ಶಕ್ತಿಯಾಗಿ ಮತ್ತು ಮಾನವೀಯತೆಯ ಪ್ರತಿ–ರೂಪವಾಗಿ ಬೆಳೆದಿರುವ ಅವರ ಜೀವನ ಪಯಣವು ಇಂದಿನ ಪೀಳಿಗೆಗೆ ಸ್ಫೂರ್ತಿದಾಯಕವಾಗಿದೆ. ಸರ್ಕಾರಿ ಸೇವೆಯಿಂದ ಅವರು ನಿವೃತ್ತಿಯಾಗುತ್ತಿರುವ ಈ ಸಂದರ್ಭದಲ್ಲಿ, ಅವರ ನಾಲ್ಕು ದಶಕಗಳ ಸೇವಾ ಬದುಕು, ಸಂಘಟನಾ ನಾಯಕತ್ವ ಮತ್ತು ಸಮಾಜಮುಖಿ ಚಿಂತನೆಗಳು ಮತ್ತೊಮ್ಮೆ ಸ್ಮರಣೀಯವಾಗುತ್ತಿವೆ.



**✦ ಸರಳ ಕುಟುಂಬದಿಂದ ಸಮಾಜಮುಖಿ ನಾಯಕತ್ವ:**
ಕೊಪ್ಪಳ ತಾಲೂಕಿನ ಕೂಗಳತೆ ದೂರದಲ್ಲಿನ ಹಲಗೇರಿ ಗ್ರಾಮದ ಸಾಮಾನ್ಯ ಕುಟುಂಬದಲ್ಲಿ ಜನಿಸಿದ ಶ್ರೀ ಶಂಭುಲಿಂಗನಗೌಡ ಪಾಟೀಲ್ ಅವರು ಬಾಲ್ಯದಿಂದಲೇ ಶಿಸ್ತು, ಪರಿಶ್ರಮ, ಪ್ರಾಮಾಣಿಕತೆ ಮತ್ತು ಸಾಮಾಜಿ–ಕ ಕಾಳಜಿಯನ್ನು ತಮ್ಮ ಬದುಕಿನ ಮೌಲ್ಯಗಳಾಗಿ ಅಳವಡಿಸಿಕೊಂಡಿದ್ದರು. ಶಿಕ್ಷಣದ ಜೊತೆಗೆ ಸಮಾಜದ ಸಮಸ್ಯೆಗಳ ಬಗ್ಗೆ ಆಸಕ್ತಿ ಹೊಂದಿದ್ದ ಅವರು, ಮುಂದೆ ಶಿಕ್ಷಕ ವೃತ್ತಿಯನ್ನು ಆಯ್ಕೆ ಮಾಡಿಕೊಂಡು ಸಾವಿರಾರು ವಿದ್ಯಾರ್ಥಿಗಳ ಭವಿಷ್ಯ ರೂಪಿಸುವ ಪವಿತ್ರ ಕಾರ್ಯದಲ್ಲಿ ತೊಡಗಿಸಿಕೊಂಡರು. ಅವರು ಶಿಕ್ಷಕರಾಗಿ ಕಾರ್ಯನಿರ್ವಹಿಸಿದ ಅವಧಿಯಲ್ಲಿ ಅವರು ಕೇವಲ ಪಾಠ ಬೋಧನೆಗೆ ಸೀಮಿತವಾಗಲಿಲ್ಲ, ಶಾಲೆಯ ಅಭಿವೃದ್ಧಿ, ವಿದ್ಯಾರ್ಥಿಗಳ ಶೈಕ್ಷಣಿಕ ಪ್ರಗತಿ ಮತ್ತು ಗ್ರಾಮೀಣ ಶಿಕ್ಷಣದ ಗುಣಮಟ್ಟ ಸುಧಾರಣೆಗೆ ವಿಶೇಷ ಒತ್ತು ನೀಡಿದರು. ತಮ್ಮ ಸರಳತೆ, ಕರ್ತವ್ಯನಿಷ್ಠ ಮತ್ತು ವಿದ್ಯಾರ್ಥಿ ಸ್ನೇಹಿ ಮನೋಭಾವದಿಂದ ಅಚ್ಚುಮೆಚ್ಚಿನ ಶಿಕ್ಷಕರಾಗಿ ಗುರುತಿಸಿಕೊಂಡರು. ನಂತರ ಹಿರಿಯ ಮುಖ್ಯೋಪಾಧ್ಯಾಯರಾಗಿ ಬಡ್ತಿ ಪಡೆದು ಶಿಕ್ಷಣ ಕ್ಷೇತ್ರದಲ್ಲಿ ವಿಶಿಷ್ಟ ಸೇವೆ ಸಲ್ಲಿಸಿದರು. ಆದರೆ ಅವರ ವ್ಯಕ್ತಿತ್ವದ ಮತ್ತೊಂದು ಮುಖ ಶಿಕ್ಷಕರು ಮತ್ತು ನೌಕರರ ಹಕ್ಕುಗಳಿಗಾಗಿ ಹೋರಾಡಿದ ಸಂಘಟನಾ ನಾಯಕರದ್ದು.



**✦ ಸಂಘಟನೆಯ ಬೆನ್ನೆಲುಬಾದ ನಾಯಕ:**
ಶಂಭಣ್ಣ ಅವರು ಶಿಕ್ಷಕರು ಮತ್ತು ಸರ್ಕಾರಿ ನೌಕರರ ಸಮಸ್ಯೆಗಳನ್ನು ಕೇವಲ ವೈಯಕ್ತಿಕ ವಿಚಾರಗಳೆಂದು ಪರಿಗಣಿಸಲಿಲ್ಲ. ಅವು ವ್ಯವಸ್ಥೆಯ ಸಮಸ್ಯೆಗಳು, ಅವುಗಳಿಗೆ ಸಮಗ್ರ ಪರಿಹಾರ ಅಗತ್ಯ ಎಂಬ ನಿಲುವು ಅವರದ್ದಾಗಿತ್ತು. ಈ ಚಿಂತನೆಯೇ ಅವರನ್ನು ಸಂಘಟನಾ ಚಟುವಟಿಕೆಗಳತ್ತ ಕರೆದೊಯ್ದಿತು. ತಮ್ಮ ದಕ್ಷ ನಾಯಕತ್ವ, ಹೋರಾಟದ ಮನೋಭಾವ ಮತ್ತು ನೌಕರರ ಮೇಲಿನ ಕಾಳಜಿಯಿಂದ ಅವರು ಕೊಪ್ಪಳ ಜಿಲ್ಲಾ ಸರ್ಕಾರಿ ನೌಕರರ ಸಂಘದ ಅಧ್ಯಕ್ಷರಾಗಿ ಸತತ ಮೂರು ಬಾರಿ ಆಯ್ಕೆಯಾಗುವ ಗೌರವ ಪಡೆದರು. ನಂತರ ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಸಂಘದ ಉಪಾಧ್ಯಕ್ಷರಾಗಿ ರಾಜ್ಯ ಮಟ್ಟದಲ್ಲಿ ಕಾರ್ಯನಿರ್ವಹಿಸಿ ನೌಕರರ ಸಮಸ್ಯೆಗಳನ್ನು ಸರ್ಕಾರದ ಗಮನಕ್ಕೆ ತರುವಲ್ಲಿ ಮಹತ್ವದ ಪಾತ್ರವಹಿಸಿದರು. ಅಷ್ಟೇ ಅಲ್ಲದೆ, ಕರ್ನಾಟಕ ರಾಜ್ಯ ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ರಾಜ್ಯಾಧ್ಯಕ್ಷರಾಗಿ ಅವಿರೋಧವಾಗಿ ಆಯ್ಕೆಯಾಗುವ ಮೂಲಕ ಶಿಕ್ಷಕರ ಹಕ್ಕುಗಳ ಹೋರಾಟಕ್ಕೆ ಧ್ವನಿಯಾಗಿ ಶಿಕ್ಷಕರ ಹೋರಾಟಕ್ಕೆ ಹೊಸ ಚೇತನ ನೀಡಿದರು.

**✦ ಶಿಕ್ಷಕರ ವರ್ಗಾವಣೆ ಸಮಸ್ಯೆಗೆ ಶಾಶ್ವತ ಪರಿಹಾರದ ಹೋರಾಟ:** ಶಂಭಣ್ಣ ಅವರ ನಾಯಕತ್ವದ ಅವಧಿಯಲ್ಲಿ ಶಿಕ್ಷಕರ ಸಮಸ್ಯೆಗಳ ಪೈಕಿ ಅತ್ಯಂತ ಜಟಿಲ ವಿಷಯವೆಂದರೆ ವರ್ಗಾವಣೆ ಸಮಸ್ಯೆ, ರಾಜ್ಯದ ಅನೇಕ ಶಿಕ್ಷಕರು 17 ರಿಂದ 18 ವರ್ಷಗಳ ಕಾಲ ಒಂದೇ ಸ್ಥಳದಲ್ಲಿ ಕಾರ್ಯನಿರ್ವಹಿಸುತ್ತಿದ್ದರು. ಕುಟುಂಬ ಒಂದು ಜಿಲ್ಲೆಯಲ್ಲಿ, ಶಿಕ್ಷಕರು ಮತ್ತೊಂದು ಜಿಲ್ಲೆಯಲ್ಲಿ ಕೆಲಸ ಮಾಡುವ ಪರಿಸ್ಥಿತಿ ನಿರ್ಮಾಣವಾಗಿತ್ತು. ಇದ–ರಿಂದ ಕುಟುಂಬದ ನೆಮ್ಮದಿ ಹಾಳಾಗುವುದು, ಮಕ್ಕಳ ಶಿಕ್ಷಣಕ್ಕೆ ತೊಂದರೆ, ಮಾನಸಿಕ ಒತ್ತಡ ಸೇರಿದಂತೆ ಹಲವು ಸಮಸ್ಯೆಗಳು ಉಂಟಾಗಿದ್ದವು. ಈ ಸಮಸ್ಯೆಯನ್ನು ಗಂಭೀರವಾಗಿ ಪರಿಗಣಿಸಿದ ಶಂಭಣ್ಣ ಅವರು ರಾಜ್ಯ ಶಿಕ್ಷಣ ಸಚಿವರು ಹಾಗೂ ಶಿಕ್ಷಣ ಇಲಾಖೆಯ ಹಿರಿಯ ಅಧಿಕಾರಿಗಳ ನಡುವೆ ಜೋಡಣಾ ಕೊಂಡಿಂ–ಯಾಗಿ, ಸಮಾಲೋಚನೆ ನಡೆಸಿ ಶಿಕ್ಷಕರ ಸಮಸ್ಯೆ ಸರ್ಕಾರದ ಗಮನಕ್ಕೆ ತಂದವರು. ಶಿಕ್ಷಕರ ಸಮಸ್ಯೆಗಳನ್ನು ಸಮರ್ಥವಾಗಿ ಮಂಡಿಸಿ, ವರ್ಗಾವಣೆ ಪ್ರಕ್ರಿಯೆಯನ್ನು ಸುಸೂತ್ರವಾಗಿ ಜಾರಿಗೊಳಿಸುವಲ್ಲಿ ಪ್ರಮುಖ ಪಾತ್ರವಹಿಸಿದವರಲ್ಲಿ ಶ್ರೀ ಶಂಭುಲಿಂಗನಗೌಡ್ರು ಅವರು. ಇದ–ರಿಂದ ಸಾವಿರಾರು ಶಿಕ್ಷಕರು ತಮ್ಮ ಕುಟುಂಬದ ಸಮೀಪದಲ್ಲಿ ಕಾರ್ಯನಿರ್ವಹಿಸುವ ಅವಕಾಶ ಪಡೆದರು. ಈ ಸಾಧನೆಯನ್ನು ರಾಜ್ಯದ ಶಿಕ್ಷಕರು ಇಂದಿಗೂ ಕೃತಜ್ಞತೆಯಿಂದ ಸ್ಮರಿಸುತ್ತಾರೆ.

**✦ ಗಟ್ಟಿ ಧ್ವನಿಯಲ್ಲಿ ಹಕ್ಕುಗಳಿಗಾಗಿ ಹೋರಾಟ:**
ಶಂಭಣ್ಣ ಅವರ ಹೋರಾಟ ಯಾವುದೇ ವ್ಯಕ್ತಿ ಅಥವಾ ಗುಂಪಿನ ವಿರುದ್ಧವಾಗಿರಲಿಲ್ಲ. ಅದು ಸದಾ ಶಿಕ್ಷಕರು ಮತ್ತು ನೌಕರರ ನ್ಯಾಯಸಮ್ಮತ ಹಕ್ಕುಗಳಿಗಾಗಿ ನಡೆದ ಹೋರಾಟವಾಗಿತ್ತು. ವಿಧಾನ ಸೌಧದಲ್ಲಿ ಗಟ್ಟಿ ಧ್ವನಿಯಾಗಿ ರಾಜ್ಯದ ಉದ್ದಗಲಕ್ಕೂ ನಿರಂತರ ಸುತ್ತಾಟ ನಡೆಸಿ ಪ್ರಾದೇಶಿಕವಾರು ಶಿಕ್ಷಕರ ಸಮಸ್ಯೆ ಆಲಿಸಿ ಸರ್ಕಾರದ ಗಮನಕ್ಕೆ ತಂದಿದ್ದವರು. ಶಿಕ್ಷಕರ ಬಡ್ತಿ ಸಮಸ್ಯೆ, ವೇತನ ಮತ್ತು ಭತ್ಯೆಗಳ ಪರಿಷ್ಕರಣೆ, ವರ್ಗಾವಣೆ ನೀತಿಯಲ್ಲಿ ಪಾರದರ್ಶಕತೆ, ನಿವೃತ್ತಿ ಸೌಲಭ್ಯಗಳ ರಕ್ಷಣೆ, ಗ್ರಾಮೀಣ ಪ್ರದೇಶದ ಶಿಕ್ಷಕರ ಸಮಸ್ಯೆಗಳು, ನೌಕರರ ಸೇವಾ ಭದ್ರತೆ, ಸಂಘಟನಾ ಬಲವರ್ಧನೆ, ರಾಜ್ಯಮಟ್ಟದ ಅನೇಕ ಪ್ರತಿಭಟನೆಗಳು, ಮನವಿ ಕಾರ್ಯಕ್ರಮಗಳು ಮತ್ತು ಮಾತುಕತೆಗಳಲ್ಲಿ ಅವರು ಪ್ರಮುಖ ಪಾತ್ರವಹಿಸಿದ್ದರು. ಅವರ ಧ್ವನಿ ಸದಾ ಶಿಕ್ಷಕರು ಮತ್ತು ನೌಕರರ ಪರವಾಗಿಯೇ ಮೊಳಗುತ್ತಿತ್ತು.

### ನಿವೃತ್ತಿ ಸೇವೆಯ ಅಂತ್ಯವಲ್ಲ

ಸರ್ಕಾರಿ ಸೇವೆಯಿಂದ ನಿವೃತ್ತಿಯಾಗಿರುವ ಶಂಭುಲಿಂಗನಗೌಡ ಪಾಟೀಲ್ ಹಲಗೇರಿ ಅವರಿಗೆ ಇದು ಅಧಿಕೃತ ಕರ್ತವ್ಯದ ಅಂತ್ಯ. ಆದರೆ ಅವರು ಕಟ್ಟಿದ ವಿಶ್ವಾಸ, ಸಂಘಟನಾ ಪರಂಪರೆ, ಹೋರಾಟದ ಇತಿಹಾಸ ಮತ್ತು ಮಾನವೀಯ ಮೌಲ್ಯಗಳು ಎಂದಿಗೂ ಅಂತ್ಯಗೊಳ್ಳುವುದಿಲ್ಲ. ಅವರ ಅನುಭವ, ಮಾರ್ಗದರ್ಶನ ಮತ್ತು ಚಿಂತನೆಗಳು ಮುಂದಿನ ಪೀಳಿಗೆಯ ಶಿಕ್ಷಕರು ಹಾಗೂ ನೌಕರರಿಗೆ ದಾರಿದೀಪವಾಗಲಿವೆ.

### ಗೌಡರ ಆದರ್ಶದ ಬದುಕಿನ ತತ್ವ

‘ನಾಯಕತ್ವ ಎಂದರೆ ಸೇವೆ’ ‘ಹೋರಾಟ ಎಂದರೆ ನ್ಯಾಯಕ್ಕಾಗಿ ಧ್ವನಿ’ ‘ಸಂಘಟನೆ ಎಂದರೆ ಒಗ್ಗಟ್ಟು’ ‘ಅಧಿಕಾರ ಎಂದರೆ ಜವಾಬ್ದಾರಿ’ ‘ಮಾನವೀಯತೆ ಎಂದರೆ ನಿಜವಾದ ನಾಯಕತ್ವ’ ತಮ್ಮ ಬದುಕಿನ ಮೂಲಕ ಅವರು ಈ ಮೌಲ್ಯಗಳನ್ನು ಸಾಕಾರಗೊಳಿಸಿದ್ದಾರೆ.

**✦ ಶಿಕ್ಷಕರು ಮತ್ತು ನೌಕರರ ‘ಅಣ್ಣ’:**
ಸಂಘಟನಾ ನಾಯಕತ್ವಕ್ಕಿಂತಲೂ ಹೆಚ್ಚು ಶಂಭಣ್ಣ ಅವರನ್ನು ವಿಶೇಷ ’ಗೊಳಿಸಿದ್ದು ಅವರ ಮಾನವೀಯತೆ. ಯಾವುದೇ ಶಿಕ್ಷಕ ಅಥವಾ ನೌಕರ ಸಮಸ್ಯೆ ಎದುರಿಸಿದಾಗ ಮೊದಲು ನೆನಪಾಗುತ್ತಿದ್ದ ಹೆಸರು ಶಂಭಣ್ಣ. ಅವರು ಕೇವಲ ಸಲಹೆ ನೀಡುವುದಲ್ಲ; ಸಮಸ್ಯೆಗೆ ಪರಿಹಾರ ಸಿಗುವವರೆಗೂ ಜೊತೆಯಾಗಿರುತ್ತಿದ್ದರು. ಅದರಲ್ಲೇ ಅನೇಕ ಶಿಕ್ಷಕರು ಇಂದಿಗೂ ಹೇಳುವ ಮಾತೆಂದರೆ “ನಮಗೆ ಸಂಕಷ್ಟ ಬಂದಾಗ ಮೊದಲು ನೆನಪಾಗುವವರು ಶಂಭಣ್ಣ.” ಈ ಮಾತು ಅವರ ಬಗ್ಗೆ ಜನರ ಮನಸ್ಸಿನಲ್ಲಿರುವ ಪ್ರೀತಿ ಮತ್ತು ವಿಶ್ವಾಸಕ್ಕೆ ಸಾಕ್ಷಿಯಾಗಿದೆ. ಸರಳತೆ ಅವರ ಅತಿದೊಡ್ಡ ಶಕ್ತಿ, ಇಂದಿನ ದಿನಗಳಲ್ಲಿ ಅನೇಕರು ನಾಯಕತ್ವವನ್ನು ಅಧಿಕಾರ ಮತ್ತು ಪ್ರಚಾರದ ಮೂಲಕ ಅಳೆಯುವ ಸಂದರ್ಭದಲ್ಲಿ, ಶಂಭಣ್ಣ ಅವರು ಸರಳತೆಯ ಮೂಲಕ ಜನಮನ ಗೆದ್ದಿದ್ದಾರೆ. ಬಿಳಿ ಉಡುಪು, ನೇರ ಮಾತು, ಎಲ್ಲರೊಂದಿಗೆ ಆತ್ಮೀಯ ವರ್ತನೆ ಮತ್ತು ಅಹಂಕಾರವಿಲ್ಲದ ವ್ಯಕ್ತಿತ್ವ ಅವರ ಗುರುತುಗಳಾಗಿವೆ. **ಅವರನ್ನು ಭೇಟಿ ಮಾಡಿದ ಪ್ರತಿಯೊಬ್ಬರೂ “ಇವರು ನಮ್ಮವರೇ” ಎಂಬ ಭಾವನೆಯೊಂದಿಗೆ ಹಿಂದಿರುಗುತ್ತಾರೆ. ಇದೇ ಅವರ ಜನಪ್ರಿಯತೆಯ ಮೂಲ ಕಾರಣವಾಗಿದೆ.**

**✦ ಮಾನವೀಯತೆಯ ಮೌಲ್ಯಗಳನ್ನು ಉಳಿಸಿದ ನಾಯಕ:**
ಶಂಭಣ್ಣ ಅವರು ನೌಕರರ ಸಮಸ್ಯೆಗಳನ್ನು ಕೇವಲ ಕಡತಗಳ ವಿಚಾರವಾಗಿ ನೋಡಲಿಲ್ಲ. ಪ್ರತಿಯೊಂದು ಸಮಸ್ಯೆಯ ಹಿಂದೆ ಒಂದು ಕುಟುಂಬ, ಒಂದು ಜೀವನ ಮತ್ತು ಒಂದು ಕನಸು ಅಡಗಿದೆ ಎಂಬ ಅರಿವು ಅವರಲ್ಲಿತ್ತು. ಆದ್ದರಿಂದಲೇ ಅವರು ಸದಾ ಹೇಳುತ್ತಿದ್ದ ತತ್ವ: “ನೌಕರರ ಗೌರವ ಕಾಪಾಡಿದಾಗಲೇ ಆಡಳಿತ ಬಲವಾಗುತ್ತದೆ.” ಈ ಚಿಂತನೆಯೇ ಅವರನ್ನು ಇತರ ನಾಯಕರಿಗಿಂತ ಭಿನ್ನಗೊಳಿಸಿದೆ. ಯುವ ಪೀಳಿಗೆಗೆ ಆದರ್ಶ, ಇಂದಿನ ಯುವ ಶಿಕ್ಷಕರು ಮತ್ತು ನೌಕರರಿಗೆ ಶಂಭಣ್ಣ ಅವರ ಜೀವನ ದೊಡ್ಡ ಪಾಠವಾಗಿದೆ.

–ಪ್ರಕಾಶ ಗೌಡ ಎಸ್.ಯು.
ಸರಕಾರಿ ಪ್ರಥಮ ದರ್ಜೆ ಕಾಲೇಜು, ಕೊಪ್ಪಳ
ಮೊ.9980910533

AJATHA SHATHRU KANNADA DAILY MORNING Editor, Printer, Publisher, & Owned by : PRADEEP KUMAR H.No. 2/77/1, Godi nilaya, Halli street, 1st ward,-Mainahalli, Koppal-583238, Dist : Koppal- Karnataka Printed at : Goditechnologies, H.No. 2/77/1, Godi nilaya, Halli street, 1st ward,Mainahalli, Koppal-583238,